

# ಬಿಸಿಲನಾಡ ಬಣ್ಣದ ಬಡಪಾಯಿಗಳು



**‘ಕಲ್ಲುಳಕ’ ಎಂದು ಕರೆಸಿಕೊಳ್ಳುವ, ಕಲ್ಲಿನ ನಡುವೆ ಬಾಳುವ ಈ ಪಕ್ಷಿ ಕಲ್ಲನ್ನೇ ತಿನ್ನುತ್ತದೆ ಎನ್ನುವ ನಂಬಿಕೆ ಜನರಲ್ಲಿದೆ. ಸಲೀಂ ಆಲಿ ಅವರಿಂದ ‘ವಂಡರ್ ನೆಕ್ಲೇಸ್ ಬರ್ಡ್’ ಎಂದು ಕರೆಸಿಕೊಂಡ ಚೆಲುವಪಕ್ಷಿ ಇದು.**

■ **ಕಲೀಮ್ ಉಲ್ಲಾ**

ಫೋಟೊಗಳು: ಪಂಪಯ್ಯ ಸ್ವಾಮಿ ಮಳೇಮಠ್ ಹಂಪಿ

ಈ ಹಕ್ಕಿಯ ಜೀವನ ಚರಿತ್ರೆ ರೋಚಕವಾಗಿದೆ. ಅವನತಿಯ ಹಾದಿಯಲ್ಲಿರುವ ಖಗವಾದ ಕಾರಣ ಇಲ್ಲಿ ಹೆಚ್ಚು ಚಿಂತಿತವಾಗಿ ಬರೆಯಬೇಕಾಗಿದೆ. ಪ್ರಕೃತಿ ತಜ್ಞ ಪಂಪಯ್ಯ ಮಳೇಮಠ್ ಇದನ್ನು ಹಂಪಿ ವಿಶ್ವವಿದ್ಯಾಲಯದ ಬೆನ್ನಿಗಿರುವ ತಮ್ಮ ತೇಜಸ್ವಿ ವನದ ಸಮೀಪ ತೋರಿಸಿದರು.

ಸಾಮಾನ್ಯವಾಗಿ ಪಕ್ಷಿ ಫೋಟೊ ತೆಗೆಯೋರು ಬೆಳಿಗ್ಗೆ ಇಲ್ಲ ಸಂಜೆ ಫೀಲ್ಡಿಗೆ ಹೋಗುವುದು ವಾಡಿಕೆ. ಬಿಸಿಲೇರಿದರೆ ಛಾಯಾಚಿತ್ರಿಗಳಿಗೆ ರಾಹುಕಾಲ ಬಡಿದಂತೆ. ಪಕ್ಷಿ ಬಂದು ಫೋಸು ಕೊಟ್ಟರೂ ತೆಗೆಯುವ ಮನಸ್ಸು ಬರುವುದಿಲ್ಲ. ಒಳ್ಳೆಯ ಬೆಳಕಿಗೆ ಪ್ರಾಣಿ ಪಕ್ಷಿಗಳು ಹದವಾಗಿ, ಅತಿ ಸಾಮೀಪ್ಯವಾಗಿ ಸಿಗಲು ಪುಣ್ಯ ಮಾಡಿರಬೇಕು. ಹೀಗಾಗಿ ಬಿಸಿಲೆದ್ದ ಸಮಯದಲ್ಲಿ ಸುಸ್ತಾದ ಕ್ಯಾಮೆರಾ ಜನ ಹೆಚ್ಚಾಗಿ ನೆರಳು ಹುಡುಕಿ ಬಿದ್ದುಕೊಳ್ಳಲು ಹವಣಿಸುತ್ತಾರೆ. ಇಲ್ಲವೇ ತೆಗೆದ ಪಟಗಳಲ್ಲಿ ಕೆಟ್ಟುಹೋದ, ಅಪೂರ್ಣಗೊಂಡ ಅಮಂಗಲಗಳನ್ನು ಡಿಲಿಟ್ ಮಾಡುವುದರಲ್ಲಿ ಬಿಝಿಯಾಗುತ್ತಾರೆ. ಇಲ್ಲಿ ‘ಛೇ ಮಿಸ್ಸಾಯಿತು’,